# ಪ್ರತಿಮಾ ಸಂಸ್ಕೃತಿ

ಪ್ರತಿಮಾ (statue)ಗೆ ಸಹಸ್ರಾರು ವರ್ಷಗಳ ಇತಿಹಾಸವಿದೆ. ತನಗೆ ಇಷ್ಟವಾದವರ, ಗೌರವಿಸಬೇಕೆನ್ನಿಸಿದವರ ಮೂರ್ತಿಗಳನ್ನು ರಚಿಸಿ ಇಟ್ಟುಕೊಳ್ಳುವ ಪದ್ಧತಿ ತುಂಬಾ ಹಳೆಯದು. ಪ್ರಾಚೀನ ಕಾಲದಲ್ಲಿ ಅಸ್ಪಷ್ಟವೂ ಅಮೂರ್ತವೂ ಒರಟೂ ಆಗಿರುತ್ತಿದ್ದ ಈ ಪ್ರತಿಮೆಗಳು ಕಾಲ ಕಳೆದಂತೆಲ್ಲಾ ಕಲೆಯ ಅಭಿವ್ಯಕ್ತಿಯ ಮಾಧ್ಯಮವಾಗಿ ಅರಳಿ ಸ್ಪಷ್ಟವೂ ನವಿರೂ ಮೂರ್ತವೂ ಆಗತೊಡಗಿದವು. ಪ್ರತಿಮೆ ಎನ್ನುವುದು 'ಇದ್ದದ್ದು' ಎನ್ನುವುದಕ್ಕಿಂತ 'ಭಾವಿಸಿ ಕಲ್ಪಿಸಿಕೊಂಡದ್ದೇ' ಆಗಿತ್ತು ಎನ್ನುವುದು ಹೆಚ್ಚು ಸತ್ಯಕ್ಕೆ ಹತ್ತಿರವಾದದ್ದು.

ಪ್ರತಿಮೆಗಳು ಮತಧರ್ಮಗಳ ಚೌಕಟ್ಟಿಗೆ ಬಂದನಂತರ ಎಲ್ಲ ಸಮಸ್ಯೆಗಳು ಉದ್ಭವವಾಗತೊಡಗಿದವು. ಪ್ರತಿಯೊಂದು ಮತಧರ್ಮವೂ ತನ್ನ ಮೂಲ ಪುರುಷರ ಹಾಗೂ ದೇವಾನುದೇವತೆಗಳ ಪ್ರತಿಮೆಗಳನ್ನು ಸೃಷ್ಟಿಸಿ ಪ್ರತಿಷ್ಠಾಪಿಸಿ ಪೂಜಿಸತೊಡಗಿದವು. ಅದು ಅಷ್ಟಕ್ಕೇ ನಿಂತಿದ್ದರೆ ಒಳಿತಾಗುತ್ತಿತ್ತು. ಅದು ಮುಂದುವರಿದು ಅನ್ಯ ಮತಧರ್ಮೀಯ ಪ್ರತಿಮೆಗಳನ್ನು ನಾಶ ಮಾಡುವ ಹಂತಕ್ಕೆ ಬೆಳೆಯಿತು. ಒಂದು ದೇಶ ಮತ್ತೊಂದು ದೇಶಕ್ಕೆ ಮುತ್ತಿಗೆ ಹಾಕಿದಾಗ ಅಥವಾ ಧರ್ಮಯುದ್ಧಗಳು ನಡೆದಾಗ ಈ ಹಲ್ಲೆ ಇನ್ನೂ ವಿಸ್ತಾರವಾದ ವ್ಯಾಪ್ತಿಯಲ್ಲಿ ನಡೆಯಿತು. ನಮ್ಮ ದೇಶದ ಇತಿಹಾಸದಲ್ಲಿಯೇ ಇಂಥ ಹಲವು ಜ್ವಲಂತ ಉದಾಹರಣೆಗಳು ಸಿಗುತ್ತವೆ. ಹಿಂದೂಗಳು ಬೌದ್ಧ ಜೈನ ಪ್ರತಿಮೆಗಳನ್ನು ನಾಶ ಮಾಡಿದರು; ಮೊನ್ನೆ ಮೊನ್ನೆ ತಾಲಿಬಾನಿಗಳು ಬೌದ್ಧ ಪ್ರತಿಮೆಗಳನ್ನು ಆಫಘಾನಿಸ್ಥಾನದಲ್ಲಿ ಕೆಡವಿದರು. ಭಾರತದಲ್ಲಿಯೇ ಬಾಬ್ರಿ ಮಸೀದಿಯನ್ನು ನಾಶ ಮಾಡಲಾಯಿತು.

ಪ್ರತಿಮೆಗಳು ಬಹಿರಂಗ ಪ್ರದರ್ಶನದ ವಸ್ತುಗಳಾಗಿ ಪರಿವರ್ತನೆ ಆದದ್ದೇ ಈ ಸಮಸ್ಯೆ ಉಜ್ವಲವಾಗಲು ಮತ್ತೊಂದು ಕಾರಣ. ಭಾರತದಲ್ಲಿ ಮತ ಧರ್ಮೀಯರ– ದೇವತೆಗಳ ವಿಗ್ರಹಗಳು ದೇವಾಲಯಗಳ ಒಳ ಭಾಗದಲ್ಲಿ ಪ್ರತಿಷ್ಠಾಪನೆಗೊಳ್ಳುತ್ತಿದ್ದವು. ಹೊರ ಭಾಗದಲ್ಲೂ ಕಾಲ ಕಳೆದಂತೆಲ್ಲಾ ಶಿಲ್ಪಕಲೆಯಾಗಿ ಅರಳ ತೊಡಗಿದ್ದು ಚರಿತ್ರೆಯಲ್ಲಿ ಇತ್ತೀಚಿನ ಬೆಳವಣಿಗೆ. ನಮ್ಮ ಪ್ರಾಚೀನರಲ್ಲಿ ಗುಹಾಂತರ ದೇವಾಲಯಗಳ ಕಲ್ಪನೆ ಬಂದದ್ದೇ ಈ ಹಿನ್ನೆಲೆಯಿಂದ. ಪ್ರೀತಿ–ಭಕ್ತಿಯಂಥ ವಿಚಾರಗಳು ಬಹಿರಂಗ ಆಚರಣೆಯಾಗಬಾರದು, ಅವು ಅಂತರಂಗದ ತೀರ ವೈಯಕ್ತಿಕ ಕ್ರಮಗಳೆಂದು ಭಾವಿಸಲಾಗಿತ್ತು. ಬಹುಶಃ ಭಾರತದಲ್ಲಿ ಪ್ರತಿಮಾ ಸಂಸ್ಕೃತಿ ಬೀದಿಗೆ ಬಂದು ನಿಂತದ್ದು ವಿದೇಶಿಯರ ಆಳ್ವಿಕೆಯ ಕಾಲದಲ್ಲಿ ಎಂದು ಹೇಳಿದರೆ ತಪ್ಪಾಗಲಾರದೇನೋ? ಗ್ರೀಕ್ ರೋಮನ್ನರ ಪ್ರತಿಮಾ ಸಂಸ್ಕೃತಿಯ ಪ್ರಭಾವ ಯೂರೋಪಿನ ತುಂಬೆಲ್ಲಾ ಹರಡಿ, ನಂತರ ಭಾರತಕ್ಕೆ ಬಂದು ರಸ್ತೆಗಳ ವೃತ್ತಗಳಲ್ಲಿ ಮೆರೆದಾಡಿತು. ವಿದೇಶಿಯರ ಆಳ್ವಿಕೆಯಲ್ಲಿ ಅವರ ರಾಜ ರಾಣಿ ಕರ್ನಲ್ ಜರ್ನಲ್‌ಗಳು ಕೂಡ ಪ್ರತಿಮೆಯಾಗಿ ನಿಲ್ಲುವ ಗೌರವಕ್ಕೆ ಭಾಜನರಾದರು. ಅವರು ನಮ್ಮ ದೇಶವನ್ನು ಬಿಟ್ಟು ಹೋದ ಮೇಲೆ ಆ ಸಂಸ್ಕೃತಿ ನಮ್ಮ ರಕ್ತಕ್ಕೂ ಅಂಟಿಕೊಂಡು ಮುಂದುವರಿಯುತ್ತಿದೆ. ಪ್ರತಿಯೊಂದು ರಾಜಕೀಯ ಪಕ್ಷದ ನಾಯಕ, ಮತ ಧರ್ಮದ ಹರಿಕಾರ, ಚಿತ್ರನಟ–ನಟಿಯರು, ಮಠಾಧೀಶರು ಇಂದು ಪ್ರತಿಮೆಗಳಾಗಿ ನಿಂತು ರಾರಾಜಿಸುತ್ತಿದ್ದಾರೆ.

ಈ ಕಾರಣದಿಂದಲೇ ಅನೇಕ ಅಶಾಂತಿಗೆ ಕಾರಣರಾಗುತ್ತಿದ್ದಾರೆ. ದ್ವೇಷ ವೈಷಮ್ಯಗಳ ನೆಲೆಯಿಂದ ವಿಘ್ನಗೊಂಡು ಕಾನೂನು ಭಂಗವಾಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಈ ಪ್ರತಿಮಾ ಸಂಸ್ಕೃತಿ ಕೇವಲ ಅಂದಾಭಿಮಾನದ ಸಂಕೇತವಾಗುತ್ತಿರುವುದರಿಂದ ಪ್ರತಿಷ್ಠೆಯ ಅಂಶವಾಗುತ್ತಿದೆ. ಇಂದು ಎಲ್ಲೆಂದರಲ್ಲಿ ವಿಜೃಂಭಿಸುತ್ತಿರುವ ಈ ಪ್ರತಿಮೆಗಳು ಜನತೆಯ ಗೌರವಕ್ಕೆ ಪಾತ್ರವಾಗುವುದರ ಬದಲು ಇರಿಸು ಮುರಿಸುಗಳಿಗೆ ಕಾರಣವಾಗಿವೆ; ನಗರಗಳ ಸೌಂದರ್ಯಕ್ಕೆ ಮಾರಕವಾಗಿ ಪರಿಣಮಿಸಿವೆ.

ನಿಜವಾಗಿಯೂ ಪ್ರತಿಮೆಗಳ ನಿರ್ಮಾಣವಾಗಬೇಕಿರುವುದು ಜನಾಂಗಗಳ ಅಂತರಂಗದಲ್ಲಿ; ಅವರ ಭಾವ ಸ್ಮೃತಿಯಲ್ಲಿ. ಈ ಭಾವ ಲೋಕದಲ್ಲಿ ನಿರ್ಮಾಣವಾಗುವ ಪ್ರತಿಮೆ ನಿಜವಾದ ಅರ್ಥದಲ್ಲಿ ಅತ್ಯಂತ ಗಟ್ಟಿಯಾದದ್ದೂ ಶಾಶ್ವತವೂ ಆಗಿರುತ್ತದೆ. ಬಹಿರಂಗ ಲೋಕದಲ್ಲಿ ನಿರ್ಮಾಣಗೊಳ್ಳುವ ಪ್ರತಿಮೆ ತಾನು ಸೃಷ್ಟಿಯಾದ ಕ್ಷಣದಿಂದಲೇ ಸೀಮಿತಾರ್ಥದ ಚೌಕಟ್ಟಿನಲ್ಲಿ ಬಂಧಿಯಾಗಿಬಿಡುತ್ತದೆ.

■ ಶಿಕಾಕು

# ಮಾತೇ ಮುತ್ತು

'ದಡ್ಡ' ನಾನು ಬುದ್ಧಿವಂತ ಎಂದು ಯೋಚಿಸುತ್ತಾನೆ; ಆದರೆ 'ಬುದ್ಧಿವಂತ'ನಿಗೆ ತಾನು ದಡ್ಡ ಎಂದು ಗೊತ್ತು.

-ಶೇಕ್ಸ್ ಪಿಯರ್

ಮತ್ತೊಬ್ಬರು ಹೇಳಿದ ಬುದ್ಧಿವಾದಕ್ಕೆ ಕಿವಿಗೊಡುವ ಸದ್ಬುದ್ಧಿ ಇದ್ದಿದ್ದರೆ ನಾವು ನಮ್ಮ ಜೀವನದ ಎಷ್ಟೋ ಅನಾಹುತಗಳನ್ನು ತಪ್ಪಿಸಿಕೊಳ್ಳಬಹುದಿತ್ತು.

-ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಬುದ್ಧಿವಾದದಿಂದ ಲಾಭ ಪಡೆಯಲು ಅದನ್ನು ಕೊಡಲು ಬೇಕಾದ ಬುದ್ಧಿಗಿಂತಲೂ ಹೆಚ್ಚು ಬುದ್ಧಿ ಬೇಕು.

-ಮ್ಯಾಕೆನ್‌ಜೀ

ತುಂಬಾ 'ಸಿಹಿ' ನಡತೆ ಬೇಡ– ಯಾರಾದರೂ 'ನುಂಗಿ'ಬಿಟ್ಟಾರು; ತುಂಬಾ 'ಕಹಿ' ನಡತೆ ಬೇಡ– ಯಾರಾದರೂ 'ಉಗಿದು'ಬಿಟ್ಟಾರು.

-ಜ್ಯೂಯಿಷ್ ಗಾದೆ

ಪರೋಪಕಾರ ಪ್ರವೀಣರು ಬುದ್ಧಿವಂತರು, ಪರೋಪದೇಶ ಪಂಡಿತರು ವಿದ್ಯಾವಂತರು.

-ಎಸ್.ವಿ.ಪರಮೇಶ್ವರ ಭಟ್ಟ

ಬಲ್ಲವರ ಒಡನಾಟ, ಬೆಲ್ಲವನು ಮೆದ್ದಂತೆ.

-ಸರ್ವಜ್ಞ

ಅಂಜಿದರೆ ಅಮರುವುದು ಮಂಜು; ಅಂಜಿಕೆ ಮಂಜು, ದಿಟ್ಟತನ ದಾರಿ ಪಂಜು.

-ಕೆ.ಎಸ್.ನರಸಿಂಹಸ್ವಾಮಿ

ಹಳಿಯದಿರು ಕುಡುಕರನು ನೀಂ ಕುಡಿಯದಿರ್ದೊಡೆ, ಕುಡಿತಕಿಂತೀಳ್ಗೆಲಸ ನೂರ ನೀ ಮಾಳ್ಪೆ.

-ಉಮರ್ ಖಯಾಂ

ಯಾವ ಭಾಷೆಯ ಹೇರಿಕೆಯೂ ಸರಿಯಲ್ಲ, ಯಾವುದೇ ಭಾಷೆಯ ಕಲಿಕೆಯನ್ನು ತಡೆಯುವುದೂ ಸರಿಯಲ್ಲ.

-ಹಾ.ಮಾ.ನಾಯಕ

ಜೀವಂತವಾದ ಯಾವ ಭಾಷೆಯೂ ತಾನು ಕಡಿಮೆ ಯೋಗ್ಯತೆಯ ಭಾಷೆಯೆಂದು ಕುಗ್ಗಬಾರದು.

-ಮಾಸ್ತಿ ವೆಂಕಟೇಶ ಅಯ್ಯಂಗಾರ್

ತಾನಾಗಿ ಬರುವುದು ತಮ್ಮ ಭಾಷೆ. ಪ್ರಯತ್ನಪೂರ್ವಕವಾಗಿ ಬರುವುದು ಅನ್ಯಭಾಷೆ.

-ಎ.ಆರ್.ಕೃಷ್ಣಶಾಸ್ತ್ರಿ

ಇನ್ನೂ ಹೆಚ್ಚು ತಿಳಿದುಕೊಳ್ಳಬೇಕೆಂಬ ಆಸೆಯನ್ನು ಚಿಕ್ಕ ವಯಸ್ಸಿನಲ್ಲಿ ನಾವು ಉಂಟು ಮಾಡದಿದ್ದರೆ, ಮಕ್ಕಳ ಕುತ್ತಿಗೆ ಕಿವುಚಿದಂತೆಯೇ ಸರಿ.

-ಕೆ.ವಿ.ಅಯ್ಯರ್

ವಿವೇಕವಂತರಾದ ತಂದೆ– ತಾಯಿಗಳು ಮಕ್ಕಳು ತಪ್ಪು ಮಾಡುವುದಕ್ಕೆ ಅವಕಾಶ ಕೊಡುತ್ತಾರೆ.

-ಮಹಾತ್ಮ ಗಾಂಧೀಜಿ

ಬಟ್ಟೆ ನೋಡಿ ಮಣೆ ಹಾಕುತ್ತಾರೆ; ಬುದ್ಧಿ ನೋಡಿ ಹೊರಗೆ ಹಾಕುತ್ತಾರೆ.

-ರಷ್ಯಾ ಗಾದೆ